ಶ್ರೀ ಕೆ. ಹೆಚ್. ರಂಗನಾಥ್.— ಮಾನ್ಯ ಸದಸ್ಯರ ಲೆಕ್ಕದ ಪ್ರಕಾರ.

ಶ್ರೀ ಸಿ. ಬೈರೇಗೌಡ.—ಅದು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಿದ್ದು. ನಾನು ಸಹ ಆಲ್ಲಿಗೆ ಹೋಗಿ ನೋಡಿಕೊಂಡು ಬಂದಿದ್ದೇನೆ. ೬೦೦ ಜನ ವಿದ್ಯಾರ್ಥಿಗಳಿಗೆ ಆಲ್ಲಿ ಪ್ರವೇಶಾವಕಾಶ ಇಲ್ಲ. ಅದು ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ಕಾಲೇಜು. ಆಲ್ಲಿ ಪ್ರವೇಶ ಪಡೆಯಬೇಕಾಗಿರುವವರೆಲ್ಲರೂ ಹಳ್ಳಿಗಳಿಂದ ಬರತಕ್ಕಂಥವರು ಆಗಿದ್ದಾರೆ ಈ ದೃಷ್ಟಿಯಿಂದ ತಾವು ಈಗ ಕಟ್ಟಡ ಬಗ್ಗೆ ಏನು ಹೇಳುತ್ತಿದ್ದೀರಿ. ಅದನ್ನು ಒಂದೇ ದಿವಸದಲ್ಲಿ ಕಟ್ಟಿಸುವುದಕ್ಕೆ ಆಗುವುದಿಲ್ಲ. ಆದ್ದರಿಂದ ಬೌಡಿಗೆಗಾದರೂ ಒಂದು ಕಟ್ಟಡ ಪಡೆದು ಗ್ರಾಮಾಂತರ ಪ್ರದೇಶಗಳಿಂದ ಬಂದಿರತಕ್ಕಂಥ ಎಲ್ಲ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ದೊರಕಿಸಿಕೊಡುತ್ತೀರಾ ?

ಶ್ರೀ ಕೆ. ಹೆಚ್. ರಂಗನಾಥ್.— ಮಾನ್ಯ ಸದಸ್ಯರು ಮತ್ತೆ ೨೦೦ ವಿದ್ಯಾರ್ಥಿಗಳನ್ನು ಜಾಸ್ತಿ ಮಾಡಿದರು. ಮೊದಲು ೪೦೦ ಇದ್ದುದು ಈಗ ೨೦೦ ಜಾಸ್ತಿ ಮಾಡಿದ್ದಾರೆ. ಆದಕ್ಕೇ ನಾನು ಹೇಳಿದ್ದು ಇದನ್ನು ಪರಿಶೀಲಿಸಿ ಅನುಕೂಲ ಮಾಡಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಹಾಗೆಯೇ ಉಪಾಧ್ಯಾಯರ ಬಗ್ಗೆ ಹೇಳುತ್ತಾರೆ. ೨೩ ಜನ ಎಂದಿದ್ದಾರೆ ನಾನು ನೋಡುತ್ತೇನೆ. ಆಷ್ಟು ಇದ್ದ ಹಾಗೆ ಕಾಣುವುದಿಲ್ಲ. ಕೆಲವು ಕಡೆ ವರ್ಗ ಮಾಡಿದ್ದಾರೆ ಆದರೆ ಕೆಲವರು ಹೋಗುತ್ತಿಲ್ಲ. ಹೋಗಿಲ್ಲ, ಇದಕ್ಕೆ ಏನು ಮಾಡಬೇಕು ಎಂಬುದನ್ನು ನಾವು ಯೋಚನೆ ಮಾಡಬೇಕಾಗಿದೆ. ಮೊದಲೇ ನಮ್ಮಲ್ಲಿ ಇರತಕ್ಕಂಥ ಉಪಾನ್ಯಾಸಕರು, ರೀಡರ್ಸ್, ಪ್ರೊಫೆಸರ್ಸ್ ಲೆಚ್ಚರರ್ಸ್, ಇವರ ಸಂಖ್ಯೆ ಕಡಿಮೆ ಹೀಗೆ ತೊಂದರೆ ಇದ್ದಾಗ ವರ್ಗ ಮಾಡಿದರೆ, ಹೋಗದೇ ಇರತಕ್ಕಂಥವರು ಜಾಸ್ತಿ ಇದ್ದಾರೆ. ಇವೆಲ್ಲ ವನ್ನೂ ಗಮನದಲ್ಲಿಟ್ಟುಕೊಂಡು ಸೂಕ್ತ ವ್ಯವಸ್ಥೆ ಮಾಡುವುದಕ್ಕೆ ಸರ್ಕಾರ ವಿಚಾರ ಮಾಡುತ್ತದೆ.

ಶ್ರೀ ಚೌಡರೆಡ್ಡಿ.—ನನ್ನ ೫ನೇ ಪ್ರಶ್ನೆಗೆ ಉತ್ತರವಾಗಿ ಅವಶ್ಯಕತೆ ಹೆಚ್ಚಾದಲ್ಲಿ ಹೊಸ ಪದವಿ ಪೂರ್ವ ಕಾಲೇಜುಗಳನ್ನು ತೆರೆಯಲು ಸರ್ಕಾರದ ಹಂತದಲ್ಲಿ ಪರಿಶೀಲಿಸಲಾಗುತ್ತಿದೆ. ಎಂದು ಹೇಳಿದ್ದೀರಿ. ಎಷ್ಟು ಪದವಿಪೂರ್ವ ಕಾಲೇಜುಗಳಿಗೆ ಬೇಡಿಕೆ ಬಂದಿದೆ ? ಚಿಂತಾಮಣಿಯಲ್ಲಿ ಏನಾದರೂ ಈ ರೀತಿ ಬೇಡಿಕೆ ಬಂದಿದೆಯೇ ಎಂದು ನಾನು ಕೇಳಬಯಸುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ಇದಕ್ಕೆ ಬೇರೆ ಪ್ರಶ್ನೆ ಹಾಕಿದರೆ ಹೇಳುತ್ತೇನೆ.

ಶ್ರೀ ಗೋಪಿನಾಥ ಆರ್ ಸಾಂದ್ರ.—ಹುಬ್ಬಳಿಯಲ್ಲಿ ಕೂಡ ವಿದ್ಯಾರ್ಥಿಗಳಿಗೆ ಅಡ್ಮಿಶನ್ ಸಿಗುತ್ತಿಲ್ಲ. ನೂರಕ್ಕೆ ೫೦ ರಷ್ಟು ಎಸ್.ಎಸ್.ಎಲ್.ಸಿ.ಯಲ್ಲಿ ತೇರ್ಗಡೆಯಾದವರು ಅಡ್ಮಿಶನ್‌ಗಾಗಿ ಓಡಾಡುತ್ತಿದ್ದಾರೆ. ಈ ದೃಷ್ಟಿಯಿಂದ ಸನ್ಮಾನ್ಯ ಮಂತ್ರಿಗಳು ಈಗಿರುವ ಕಾಲೇಜುಗಳಲ್ಲಿ ಹೆಚ್ಚಿಗೆ ವರ್ಗಗಳನ್ನು ತೆರೆಯಲು ವ್ಯವಸ್ಥೆ ಮಾಡುತ್ತಾರೆಯೇ ಅಥವಾ ಬೇರೆಯಾರಾದರು ಕಾಲೇಜುಗಳನ್ನು ತೆಗೆಯುತ್ತೀವೆ ಎಂದು ಮುಂದೆ ಬಂದರೆ ಅವರಿಗೆ ಅವಕಾಶ ಮಾಡಿಕೊಡತ್ತೀರಾ ?

ಶ್ರೀ ಕೆ. ಹೆಚ್. ರಂಗನಾಥ್.—ಹೆಚ್ಚು ಮಕ್ಕಳನ್ನು ಸೇರಿಸಿಕೊಳ್ಳುವುದಕ್ಕೆ ಏನು ಮಾಡುತ್ತಿದ್ದೇವೆ ಎಂದು ಈಗಾಗಲೇ ಪ್ರಸ್ತಾಪಮಾಡಿದ್ದೇನೆ.

ಪ್ರಾಥಮಿಕ ಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರಿಗೆ ರೋಸ್ಟರ್ ಪದ್ಧತಿ ಅಳವಡಿಸುವ ಬಗ್ಗೆ

೪೭೩. (೧೬೮೫) ಶ್ರೀ ಮನೋಹರ ಐನಾಪುರ (ಬಳ್ಳಾರಿ).—ಮಾನ್ಯ ಶಿಕ್ಷಣ, ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ಪ್ರಾಥಮಿಕ ಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರಿಗೆ ರೋಸ್ಟರ್ ಪದ್ಧತಿ ಅಳವಡಿಸಿರುವುದು ವಾಸ್ತವವೇ?

ಆ) ಹಾಗಿದಲ್ಲಿ, ಅದು ಅಪರ ಜಿಲ್ಲೆಯಿಂದ ವಂಚಿತರನ್ನಾಗಿ ಮಾಡುವುದಿಲ್ಲವೇ ?

ಇ) ಮೇಲೆ ಹೇಳಿದ ಶಿಕ್ಷಕರಿಗೂ ರೋಸ್ಟರ್ ಪದ್ಧತಿ ಜಾರಿಗೆ ಬರುವಂತೆ ಮಾಡಲು ಸರ್ಕಾರವು ಕ್ರಮ ಕೈಗೊಳ್ಳುವುದೇ ?

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ, ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು).—

ಅ) ಇಲ್ಲ. ಸರ್ಕಾರಿ ಶಾಲೆಗಳಲ್ಲಿ ಎಸ್.ಸಿ. ಎಸ್.ಟಿ. ಶಿಕ್ಷಕರಿಗೆ ಸರ್ಕಾರದ ಮೀಸಲಾತಿ ನಿಯಮಗಳನ್ನು ಅಳವಡಿಸಲಾಗುತ್ತಿದೆ. ಅಲ್ಪ ಸಂಖ್ಯಾಂತರಿಂದ ನಡೆಸಲ್ಪಡುತ್ತಿರುವ ಶಾಲೆಗಳನ್ನು ಹೊರತುಪಡಿಸಿ, ಉಳಿದೆಲ್ಲ ಖಾಸಗಿ ಅನುದಾನಿತ ಮತ್ತು ಅನುದಾನರಹಿತ ಶಾಲೆಗಳಲ್ಲಿ ಈ ಮೀಸಲಾತಿ ನಿಯಮಗಳನ್ನು ಪಾಲಿಸಲಾಗುತ್ತಿದೆ.

ಆ) ಉದ್ಭವಿಸುವುದಿಲ್ಲ,

ಇ) (ಅ) ನಲ್ಲಿ ಹೇಳಿದ ಹಾಗೆ ಈಗಾಗಲೇ ಕ್ರಮ ಕೈಗೊಂಡಿದೆ.

೧೨–೧೫ ಪಿ. ಎಂ.

ಶ್ರೀ ಮನೋಹರ ಐನಾಪುರ.—ಮಾನ್ಯ ಸಭಾಧ್ಯಕ್ಷರೇ, ಇಲ್ಲಿ ನಾನು ಕೇಳಿರುವ ಪ್ರಶ್ನೆಯೇ ಬೇರೆ, ಮಾನ್ಯಮಂತ್ರಿಗಳು ಕೊಟ್ಟಿರುವ ಉತ್ತರವೇ ಬೇರೆ ನಾನು ಕೇಳಿದ ಪ್ರಶ್ನೆಯನ್ನು ಓದುತ್ತೇನೆ. ಮಾನ್ಯಮಂತ್ರಿಗಳು ಈ ಪ್ರಶ್ನೆಗೆ ಉತ್ತರ ಕೊಡುತ್ತಾರೆಂದು ನಾನು ಬಯಸುತ್ತೇನೆ.

"It is learnt that the Government Departments including Education Department-there is 50% promotions given as per the roster system other than teaching staff. Further it is learnt that there is promotion quota to the employees belong to SC/ST employees of the department : whether it is brought to the notice of the Government that the same facility is not provided to SC/ST primary school teacher wheare trained graduates who have fully qualified as perthe reservation quota provided to other employees of the Departments.

It is requested that 50% promotion as per the quota system school be provided to SC/ST qualified trained primary school teachers and it is further requested that necessary Government order may please be issued in this regard,...

ಆದ್ದರಿಂದ ಮಾನ್ಯಸಚಿವರಲ್ಲಿ ವಿನಂತಿ ಏನೆಂದರೆ, ಎಸ್. ಸಿ. ಎಸ್. ಟಿ, ತರಬೇತಿ ಪಡೆದ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಪ್ರಮೋಷನ್ ಸೌಲಭ್ಯ ಇದೆಯೋ ಇಲ್ಲವೋ, ಈಸೌಲಭ್ಯ ಇದ್ದರೆ, ಏಕೆ ಕೊಡುತ್ತಾ ಇಲ್ಲ.

ಶ್ರೀ ಕೆ. ಹೆಚ್. ರಂಗನಾಥ್.—ಈ ಪ್ರಶ್ನೆ ಬೇರೆ ಇದ್ದಹಾಗೆ ಇದೆ. ಮಾನ್ಯ ಸದಸ್ಯರು ಏನು ಹೇಳಿದರು, ಆ ರೀತಿ ಈ ಪ್ರಶ್ನೆ ಇಲ್ಲ. ನಮ್ಮ ಆಫೀಸಿನಿಂದ ನನಗೆ ಬಂದಿರುವುದನ್ನು ಓದಿ ಎಂದು ಹೇಳಿದರೆ, ಓದುತ್ತೇನೆ.

ಶ್ರೀ ಮನೋವರ ಐನಾಪುರ.—ನನ್ನ ಇಂಟ್ರಪ್ರಿಟೇಷನ್ ಲಾಂಗ್ ಮಾಡಿದ್ದಾರೆ.

ಅಧ್ಯಕ್ಷರು.—ಬೇರೆ ಪ್ರಶ್ನೆ ಕೊಡಿ, ಅದನ್ನು ಮುಂದೆ ಸೇರಿಸೋಣ.

ಶ್ರೀ ಮನೋಹರ ಐನಾಪುರ.— ಪ್ರಾಥಮಿಕ ಶಾಲೆಗಳಲ್ಲಿ ಕೆಲಸ ಮಾಡುವ ಪದವೀಧರ ಎಸ್.ಸಿ, ಎಸ್.ಟಿ. ಶಿಕ್ಷಕರಿಗೆ ಪ್ರಮೋಷನ್ ಕೊಡುವಾಗ ೫೦ ಪರ್ಸೆಂಟ್ ರಿಸರ್ವೇಷನ್ ಕೊಡುತ್ತಿರೋ, ಇಲ್ಲವೋ ಎಂಬುದನ್ನು ಹೇಳಬೇಕು. ಏಕೆಂದರೆ, ಬಿಜಾಪುರ ಜಿಲ್ಲೆಯ ಪದವೀಧರ ಎಸ್.ಸಿ. ಎಸ್,ಟಿ. ಶಿಕ್ಷಕರು ಈ ಬಗ್ಗೆ ಅಪೀಲು ಮಾಡಿಕೊಂಡಿದ್ದಾರೆ.

ಶ್ರೀ ಕೆ. ಹೆಚ್. ರಂಗನಾಥ್.—ಈಗಿರುತಕ್ಕ ಪದ್ಧತಿ ಪ್ರಕಾರ ಪ್ರಾಥಮಿಕ ಶಾಲೆಗಳಲ್ಲಿ ಮುಖ್ಯೋ

ಪಾಧ್ಯಾಯರಾಗಿ ಏನು ಮುಂಬಡ್ತಿ ಬರುತ್ತದೆ. ಆದರಲ್ಲಿ ರೋಸ್ಟರ್ ಪದ್ಧತಿಯನ್ನು ಅನುಸರಿಸುತ್ತಿದ್ದೇವೆ. ಆದರೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವಂತೆ ಎಸ್.ಪಿ. ಎಸ್.ಟಿ. ಶಿಕ್ಷಕರಿಗೂ ಪ್ರಮೋಷನ್ ಕೊಡುತ್ತೀರೋ ಇಲ್ಲವೋ ಎಂದು ಕೇಳಿದ್ದಾರೆ. ಈಗಿರುವುದರಲ್ಲಿ ೧೦೦ಕ್ಕೆ ೨೫ ರಷ್ಟು ಮುಂಬಡ್ತಿಯ ವ್ಯವಸ್ಥೆ ಇದೆ. ಈ ರೀತಿ ಕೊಡುವಾಗ ರೋಸ್ಟರ್ ಸಿಸ್ಟಂ ಅನುಸರಿಸುತ್ತಾ ಇಲ್ಲ.

ಶ್ರೀ ಬಿ. ಎನ್. ಚವಾಣ್.—ಮಾನೇಜ್‌ಮೆಂಟ್‌ನವರು ನಡೆಸತಕ್ಕ ವಿದ್ಯಾಸಂಸ್ಥೆಗಳಲ್ಲಿ ಈ ರೋಸ್ಟರ್ ಸಿಸ್ಟಂ ಅನ್ನು ಇಂಪ್ಲಿಮೆಂಟ್ ಮಾಡುತ್ತಿದ್ದಾರೋ ಅಥವಾ ಇಲ್ಲವೋ ಎಂಬುದನ್ನು ತಿಳಿಸಬೇಕು.

ಶ್ರೀ ಕೆ. ಹೆಚ್. ರಂಗನಾಥ್.—ಇದಕ್ಕೆ ಪ್ರತ್ಯೇಕವಾದ ಪ್ರಶ್ನೆ ಕೇಳಿದರೆ, ಉತ್ತರ ಕೊಡುತ್ತೇನೆ.

ಕರ್ನಾಟಕ ರಾಜ್ಯದಲ್ಲಿ ಬೆಳೆ ವಿಮಾ ಯೋಜನೆ ಮಾಡಿಸಿದವರ ಸಂಖ್ಯೆ ಬಗ್ಗೆ

೪೮೪೪ (೧೫೫೫) ಶ್ರೀ ಜಿ.ಎಸ್ ಆಚಾರ್ (ಬೈಂದೂರು).—ಮಾನ್ಯ ಕೃಷಿ ಹಾಗೂ ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

ಅ) ಕರ್ನಾಟಕ ರಾಜ್ಯದಲ್ಲಿ ೧೯೮೮-೮೯ ಮತ್ತು ೧೯೮೯-೯೦ನೇ ವರ್ಷದಲ್ಲಿ ಎಷ್ಟು ಜನ ರೈತರು ಬೆಳೆವಿಮೆ ಮಾಡಿಸಿದ್ದಾರೆ (ಜಿಲ್ಲಾವಾರು ವಿವರ ನೀಡುವುದು) ?

ಆ) ಅವುಗಳಲ್ಲಿ (೧) ರಾಷ್ಟ್ರೀಕೃತ ಬ್ಯಾಂಕ್ (೨) ಗ್ರಾಮೀಣ ಬ್ಯಾಂಕು (೩) ಸಹಕಾರಿ ಸಂಸ್ಥೆಗಳ ಮೂಲಕ ಏಮೆ ಮಾಡಿಸಿದ್ದೆಷ್ಟು ?

ಇ) ಅವುಗಳ ಪೈಕಿ ಎಷ್ಟು ಮಂದಿಗೆ ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಪರಿಹಾರ ಒದಗಿಸಲಾಗಿದೆ ?

ಶ್ರೀ ಎಸ್. ಬಂಗಾರಪ್ಪ (ಕೃಷಿ ಮತ್ತು ತೋಟಗಾರಿಕೆ ಸಚಿವರು).—

ಅ) ೧೯೮೮-೮೯ನೇ ಸಾಲಿನಲ್ಲಿ ಬೆಳೆ ವಿಮಾ ಯೋಜನೆಯನ್ನು ಜಾರಿಗೊಳಿಸುವ ಬಗ್ಗೆ ಕೇಂದ್ರ ಸರಕಾರವು ನಿರ್ಣಯವನ್ನು ತಡವಾಗಿ ತೆಗೆದುಕೊಂಡು ತಿಳಿಸಿದ್ದರಿಂದ ರಾಜ್ಯದಲ್ಲಿ ಬೆಳೆ ವಿಮಾ ಯೋಜನೆಯನ್ನು ಜಾರಿಗೊಳಿಸಲಾಗಲಿಲ್ಲ. ೧೯೮೯-೯೦ನೇ ಸಾಲಿನಲ್ಲಿ ೨.೦೪,೮೪೦ ಜನ ರೈತರು ಬೆಳೆ ವಿಮೆ ಮಾಡಿಸಿದ್ದರು. ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಹಣಕಾಸು ಸಂಸ್ಥೆಗಳ ಮೂಲಕ ೧೯೮೯-೯೦ನೇ ಸಾಲಿನಲ್ಲಿ ಮಾಡಲಾದ ವಿಮಾ ಪೊತ್ತವು ಈ ಕೆಳಕಂಡಂತಿದೆ.

ಸಂಸ್ಥೆಗಳು	ವಿಮಾ ಮಾಡಲಾದ ಪೊತ್ತ (ಲಕ್ಷ. ರೂಗಳಲ್ಲಿ)
೧) ರಾಷ್ಟ್ರೀಕೃತ ಬ್ಯಾಂಕ್	೧೩೭೪
೨) ಗ್ರಾಮೀಣ ಬ್ಯಾಂಕು	೯೮೬
೩) ಸಹಕಾರಿ ಸಂಸ್ಥೆಗಳು	೨೫೫೭
ಒಟ್ಟು	೪೯೧೭

ಇ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ:
ಅನುಬಂಧ

ಕರ್ನಾಟಕದಲ್ಲಿ ೧೯೮೯-೯೦ನೇ ಸಾಲಿನಲ್ಲಿ ಬೆಳೆ ವಿಮಾ ಯೋಜನೆಯಡಿಯಲ್ಲಿ ಜಿಲ್ಲಾವಾರು ಬೆಳೆ ವಿಮೆ ಮಾಡಿಸಿದ ರೈತರ ಸಂಖ್ಯೆ ನಷ್ಟ ಪರಿಹಾರವನ್ನಾಗಿ ನೀಡಿದ ಹಣ ಮತ್ತು ಲಾಭ ಪಡೆದವರ ಸಂಖ್ಯೆ